ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು
ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

Registered No. B G 182

ಗೋರಕ್ಷಣ

GORAKSHANA

15 ನೇ ವರ್ಷ 1965 ನೇ ಮೇ 29 May 1965

Help The Gorakshana

★

"ಗೋರಕ್ಷಣ"ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ · 'ಗೋರಕ್ಷಣ'ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಕಾಮಧೇನು ಪೂಜಾ

ಅನಂತಸಭಾಂಕಯ್ಯಂಗಾರ್
[ಶಾಸ್ತ್ರ ಧರ್ಮ ಪ್ರಚಾರ ಸಭಾ
ಹೊಂಗನೂರು

★

(ಮುಂದುವರಿದದ್ದು)

ಹಿಮಧರ್ಮರಿತಾಯನಿಂದ ಉಪದೇಶವಾದ ಗೋಮತಿ ಸ್ತೋತ್ರದ ಅರ್ಥವಿದು :

ಎಲ್ಲಾ ಜಪತಪೋಶ್ವರಾದ ಬ್ರಾಹ್ಮಣರುಗಳಿಂದ ! ಸಮಸ್ತ ಪಾಪಗಳನ್ನೂ ಪರಿಹರಿಸುವ ಗೋಮತೀ ವಿದ್ಯೆಯನ್ನು ಹೇಳುತ್ತೇನೆ– ನಾನು ಹೇಳುವ ಈ ಸ್ತೋತ್ರವನ್ನು ನೀವೆಲ್ಲರೂ ಮನಸ್ಸು ಸಮಾಧಾನವುಳ್ಳವರಾಗಿ ಕೇಳಿರಿ. ಗೋವುಗಳು ಗಂಗೆಯ ಗಂಧವುಳ್ಳವಾದ್ದರಿಂದ ಸುರಭಿಗಳಾಗಿವೆ : ಗೋವುಗಳೇ ಸಮಸ್ತ ಪ್ರಾಣಿಗಳಿಗೂ ಆಧಾರ, ಗೋವೇ ಪರಮ ಪುಣ್ಯ ವಸ್ತು, ಗೋವೇ ಅನ್ನರೂಪವಾಗಿದೆ ಮತ್ತು ದೇವತೆಗಳಿಗೆ ಉತ್ತಮ ಹವಿಸ್ಸನ್ನು ಕೊಡುವುದಾಗಿದೆ; ಗೋವು ಸಮಸ್ತ ಪ್ರಾಣಿಗಳಿಗೂ ಪವಿತ್ರವಾದದ್ದು, ಗೋವು ಸಮಸ್ತ ಪ್ರಾಣಿಗಳನ್ನು ರಕ್ಷಿಸುತ್ತದೆ ವಿಶ್ವ ಧರಿಸುತ್ತದೆ, ಸ್ವರ್ಗದಲ್ಲಿರುವ ದೇವತೆಗಳಿಗೆ ಮಂತ್ರಪೂತವಾದ ಹವಿಸ್ಸಿನಿಂದ ಸಂತೋಷಪಡಿಸುತ್ತದೆ. ಅಗ್ನಿಹೋತ್ರಗಳಾದ ಕರ್ಮಗಳಿಗೆ ಗೋವೇ ವಿಶ್ವಯಜ್ಞಸಾಧನವಾಗಿದೆ. ಗೋವೇ ಸಮಸ್ತ ಪ್ರಾಣಿಗಳನ್ನೂ ಮುಖ್ಯವಾಗಿ ರಕ್ಷಿಸುವುದ, ಗೋವೇ ಪರಮ ಪವಿತ್ರ, ಗೋವೇ ಪರಮ ಪುಣ್ಯ, ಗೋವೇ ಸ್ವರ್ಗಕ್ಕೆ ಸೋಪಾನವಾಗಿದೆ ಉತ್ತಮವಾದ ಗೋವೇ ಕೃಷಿಕರ್ಮಕ್ಕೆ ಶಾಂತಿಯುಳ್ಳ ಗೋವುಗಳಿಗೆ ನಮಸ್ಕಾರ, ಸುಂಭಿಗಳಿಗೆ ನಮಸ್ಕಾರ, ಒಳ್ಳೆಯ ಮಕ್ಕಳುಳ್ಳ ಗೋವುಗಳಿಗೆ ನಮಸ್ಕಾರ, ಪವಿತ್ರಕಾಂಗಳಾದ ಗೋವುಗಳಿಗೆ ನಮಸ್ಕಾರ.

(ಬ್ರಹಸ್ಪತಿ) ಗೋಹತ್ಯೆ ಮಾಡಿದವನಿಗೆ ನಾನು ಹೇಳಿದ ಶುದ್ಧಿಯನ್ನು ತಿಳಿಯಿರಿ– ಅಯುಧ ಮೊದಲಾದುವುಗಳಿಂದ ಗೋವನ್ನು ಸಂಹರಿಸಿದವನು ಮನುಗಳಿಂದ ಹೇಳಲ್ಪಟ್ಟ ವ್ರತವನ್ನು ಮಾಡಬೇಕು. ಹುಲ್ಲು ಮುಂತಾದುವುಗಳನ್ನು ಮೇಯುವುದಕ್ಕೇ ಅವಕಾಶ ಕೊಡದೇ ಗೋಹತ್ಯ ಮಾಡಿದವನು ಅಂಗೀರಸರು ಅಥವಾ ಆವಸ್ಯರು ಹೇಳಿದ ವ್ರತವನ್ನು ಮಾಡಬೇಕು. ಗೋವಧೆ ಮಾಡಿದವನು ಕಾಲು ಭಾಗ ಕೃಚ್ಛ್ರವನ್ನೂ ಕಟ್ಟುವುದಂಲ್ಲಿ ಗೋಹತ್ಯನ್ನು ಕೆಡುಹಿದವನು ಅರ್ಧ ಕೃಚ್ಛ್ರವನ್ನೂ ಗೋವಿನ ಮೇಲೆ ಏರಿಕೊಂಡವನು ಮೂರು ಭಾಗ ಕೃಚ್ಛ್ರವನೂ, ಕಳ್ಳನಿಂದ ಹೊಡೆದವನು ಸಂಪೂರ್ಣ ಕೃಚ್ಛ್ರವನ್ನೂ ಮಾಡಬೇಕು. ಗರ್ಭವುಳ್ಳ ಗೋವನ್ನಾದರೂ ಕಡಿಯುವುದನ್ನಾದರೂ, ಶಾಧುವಾದದ್ದನ್ನಾದರೂ, ಕರೀ ಅಳಲನ್ನಾದರೂ ಪ್ರತಿಬಂಧ ಮಾಡಿ ಸಂಹರಿಸಿದವನು ದ್ವಿಗುಣ ವ್ರತವನ್ನು ಮಾಡಬೇಕು, ಮುದಿಯಾದದ್ದನ್ನಾದರೂ, ಅತಿ ಕೃಶವಾದುದನ್ನಾದರೂ ಅತಿ ಎಳೆಯದಾದ್ದನ್ನಾದರೂ ರೋಗವುಳ್ಳದ್ದನ್ನಾದರೂ ಸಂಹರಿಸಿದರೆ ಅರ್ಧ ವ್ರತ ಮಾಡಬೇಕು. ದಂಡಕ್ಕಿಂತಲೂ ಮೇಲಿನ ಆಯುಧದಿಂದಲಾದರೂ ಪ್ರಹಾರ ಮಾಡಿ ಗೋವನ್ನು ಕೆಡಹಿದರೆ ಗೋವಧೆಗೆ ಹೇಳಿದ ಪ್ರಾಯಶ್ಚಿತ್ತದ್ವಿಗುಣವಾಗಿ ಮಾಡಬೇಕು. ಯಾವನಾದರೂ ಕಳ್ಳನಿಂದ ಅಥವಾ ದಂಡದಿಂದ ಗೋವನ್ನು ಹೊಡೆಯಲು ಅದಂ ಕೊಂಬು ಮುರಿದರೆ ಏಕಾದ ವ್ರತವನ್ನೂ ಎಲುಬು ಮುರಿದರೆ ಎರಡು ಏಕಾದ ವ್ರತವನ್ನೂ ಒಂದು ಕಿವಿ ಹೋದರೆ ಮೂರು ಏಕಾದ ವ್ರತವನ್ನೂ ಅದು ಕೆಳಗೆ ಬಿದ್ದರೆ ಸಂಪೂರ್ಣ ವ್ರತವನ್ನೂ ಮಾಡಬೇಕು.

(ಮುಂದುವರಿಯುವುದು)

★

ಪ್ರಾಣಿಗಳಲ್ಲಿ ಪ್ರೀತಿ ಬೆಳೆಸಿರಿ

ಇಂದು ನಾವು ನೆಲೆಸಿರುವ ಭಾರತಭೂಮಿಯು ಪುಣ್ಯಭೂಮಿ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ : ಇಂತಹ ಭಾರತದ ನಮ್ಮ ಸಂಸ್ಕೃತಿಯು ಬೇರೆ ಎಲ್ಲ ಸಂಸ್ಕೃತಿಗಳಿಗಿಂತಲೂ ಉನ್ನತವಾದುದೆಂಬುದರಲ್ಲಿ ಸಂಶಯವೇ ಇಲ್ಲ: ಹಿಂದಿನಿಂದಲೂ ಬೇರೆ ಜೀವಿಗಳಿಗೆ ನೋವುಂಟುಮಾಡುವುದು ಪಾಪಕರವೆಂದು ತಿಳಿದ ನಾವು ಇನ್ನೂ ಎಷ್ಟೋ ಪ್ರಾಣಿಗಳನ್ನು ಕೊಲ್ಲುವುದು ಅಥವಾ ಕೊಲ್ಲುವವರಿಗೆ ಪ್ರೋತ್ಸಾಹ ನೀಡುವುದು ನಮ್ಮ ಸಂಸ್ಕೃತಿಗೆ ಹಾಗೂ ನಮ್ಮ ಮಾರ್ಗದರ್ಶಕರಿಗೆ ಕಾಂದು ಶಾಂದಂತಾಗುತ್ತದೆ ; ಅಹಿಂಸಾ ಪರಮೋ ಧರ್ಮಃ ಎಂಬ ವೇದ ವಾಕ್ಯವನ್ನು ಎಲ್ಲ ಶಾಸ್ತ್ರಗಳಲ್ಲಿಯೂ ಕಾಣುತ್ತೇವೆ ; ಅಂದರೆ ಹಿಂಸೆಯನ್ನು ಮಾಡದಿರುವುದೇ ಅಹಿಂಸೆ . ಇದೇ ಹಿಂದೂಧರ್ಮದ ಮೂಲ ತತ್ವ ; ಇದೇ ತತ್ವವನ್ನು ಅಂದು ಸಾಧು ಸಂತರೂ, ರಾಷ್ಟ್ರನಾಯಕರೂ, ರಾಷ್ಟ್ರಪ್ರೇಮಿಗಳೂ ಜನಗಳ ಹೃದಯದಲ್ಲಿ ತುಂಬಿ ಹಿಂಸಾಕೃತ್ಯಗಳನ್ನು ಕಡಿದು ಪವಾಡ ಪುರುಷರೆನಿಸಿದರು ; ಇಂದು ನಾವು ಪುನಃ ಅವರ ಈ ತತ್ವವನ್ನು ಕೈಗೆ ತಂದುಕೊಳ್ಳುವುದು ಅವಶ್ಯವಾಗಿದೆ.

ನಮ್ಮ ಯಾವುದೇ ಒಂದು ಕಾರ್ಯಸಫಲವಾಗಲೀ, ಅದು ಕಾಲ ದೇಶ ವರ್ತಮಾನಗಳನ್ನು ಅನುಸರಿಸಿ ನಡೆಯಬೇಕಾಗಿದೆ ; ನಮ್ಮ ಪೂರ್ವಕಾಲದಲ್ಲಿ ದೇವರುಗಳಿಗೆ ಪ್ರಾಣಿಗಳನ್ನು ಆಹುತಿಯಾಗಿ ಕೊಡುವುದರಿಂದ ತಮ್ಮ ಇಷ್ಟಾರ್ಥ ಸಿದ್ಧಿಸುತ್ತವೆ ಎಂಬ ಮೂಢ ನಂಬಿಕೆಯನ್ನು ಇಂದು ನಾವು ಅನುಸರಿಸುವುದು ಸಮಂಜಸವಲ್ಲ : ಹಾಗೆ ಸಮಂಜಸವಾದರೆ ಬೇರೆ ಪ್ರಾಣಿಗಳನ್ನು ಆಹುತಿ ಕೊಡುವುದಕ್ಕಿಂತ ನಮ್ಮ ಪ್ರಾಣಗಳನ್ನು ಕೊಡುವುದು ಸರಿಬೀನಿಸುತ್ತದೆ ; ಆದರೆ ನಮ್ಮ ಪ್ರಾಣಗಳ ಮೇಲೆ ನಮಗೆ ಆಶೆ ಇರುವುದರಿಂದ ಅದು ಅಸಾಧ್ಯವೆನಿಸುತ್ತದೆ : ಸೃಷ್ಟಿಯಲ್ಲಿ ನಮ್ಮ ಹಾಗೇ ಪ್ರಾಣಿಗಳು ಸೃಷ್ಟಿಯಾಗಿವೆ : ಹಿಂದೆ ಪ್ರಾಣಿಗಳಿಗೆ ವಾಕ್ ಜಾತಿಯುರ್ಯವಿತ್ತೆಂಬುದು ಅವುಗಳ ವಿವಿಧ ಧ್ವನಿಗಳಿಂದ ಊಹಿಸಬಹುದಾಗಿದೆ ; ಇಂದು ಅವುಗಳು ಮೂಕವಾಗಿರುವುದು ಸಹಜ ; ಆದರೆ ನಮ್ಮಲ್ಲಿರುವ ಆತ್ಮವೇ ಅವುಗಳಲ್ಲಿಯೂ ಇರುವನು ; ದವ್ವ ಹಾಗೆಯೇ ಅವುಗಳಿಗೂ ಸುಖದುಃಖಗಳ ಅರಿವು ಉಂಟಾಗುತ್ತದೆ ; ನಮ್ಮ ಹಾಗೆಯೇ ಅವುಗಳಿಗೂ ಹಸಿವು ನೀರಡಿಕೆಗಳು ಉಂಟಾಗುತ್ತದೆ ; ನಮ್ಮ ಹಾಗೆಯೇ ಅವುಗಳಿಗೂ ತಮ್ಮ ಮಕ್ಕಳ ಮೇಲೆ ಪ್ರೀತಿ ವಿಶ್ವಾಸಗಳಿರುತ್ತವೆ ; ನಮ್ಮ ಹಾಗೆಯೇ ಅವುಗಳಿಗೂ ಸಮಾನ ಹಕ್ಕುಗಳಿವೆ : ಆದುದರಿಂದ ನಮ್ಮ ಇಷ್ಟಾರ್ಥಸಿದ್ಧಿಗಾಗಿ ಬೇರೆ ಜೀವಗಳನ್ನು ನೋಯಿಸುವುದು ಸರಿಯಲ್ಲ : ಈ ಎಲ್ಲ ವಿಷಯಗಳನ್ನು ಅರಿತ ನಾವು ಪ್ರಾಣಿಗಳನ್ನು ಹಿಂಸಿಸದೆ ಮತ್ತು ಹಿಂಸಾಕಾರ್ಯಗಳಿಗೆ ಪ್ರೋತ್ಸಾಹ ನೀಡದೆ, ಪ್ರಾಣಿಗಳನ್ನು ಅಭಿವೃದ್ಧಿಗೊಳಿಸಿ ಅವುಗಳಲ್ಲಿ ಪ್ರೀತಿ ಬೆಳೆಸಬೇಕಾಗಿದೆ.

ನಮ್ಮ ಇಂದಿನ ವಿಜ್ಞಾನವು ವಿವಿಧ ಮುಖಗಳಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೂ ಕೆಲವು ವಿಷಯಗಳಲ್ಲಿ ದೇಶದ ಮುಖ್ಯ ಸಂಪತ್ತನ್ನು ನಾಶಮಾಡುವುದರಲ್ಲಿ ಅಭಿವೃದ್ಧಿಹೊಂದುತ್ತಿರುವುದು ವಿಷಾದದಕರ ವಿಷಯವೇ ಆಗಿದೆ : ಸುಖವಾಗಿ ಜೀವಿಸುತ್ತಿರುವ ವಿನೂತನ ವೈಜ್ಞಾನಿಕ ಯಂತ್ರೋಪಕರಣಗಳಿಗೆ ಕೊಟ್ಟ ಆಯುಗಳ ಮುಂದಿನ ಕಕ್ಷ ಇವುಗಳನ್ನು ಬೇರೆಬೇರೆಯಾಗಿ ಮಾಡುವ

ಈ ಧರ್ಮಾಂತೋತ್ಪಾದಕಾರಣಗಳಿಗೆ ನಮ್ಮ ಗಳ ಪೂರ್ಣ ಧಿಕ್ಕಾರ ತೋರಬೇಕಾಗಿದೆ : ಹಾಗಿಲ್ಲದಿದ್ದಲ್ಲಿ ನಮ್ಮ ದೇಶದಲ್ಲಿ ಪ್ರಾಣಿಗಳು ದಿನೇದಿನೇ ಕ್ಷೀಯಿಸುತ್ತಿದ್ದು ಕೊನೆಗೆ ಅದರ ಮಂಶವೇ ಇಲ್ಲದಂತಾಗ ವುದರಲ್ಲಿ ಸಂಶಯವಿಲ್ಲ : ಆದ್ದರಿಂದ ಎಲ್ಲ ಹಕ್ಕುಬಾಧ್ಯತೆ ಹೊಂದಿರುವ ನಾವು ಎಚ್ಚೆತ್ತುಗೊಂಡು, ಇಂತಹ ಹೀನ ಧರ್ಮಾಂತೋತ್ಪಾದಕಾರಣಗಳ ಬಗ್ಗೆ ಪ್ರತಿಭಟನೆ ಸೂಚಿಸಬೇಕು. ಇದರಲ್ಲೂ ಪವಿತ್ರ ಮಕ್ಕು ಪುಣ್ಯ ಕ್ಷೇತ್ರಗಳ ಬಳಿ ಈ ಘೋರ ಕಾರ್ಯ ಕಾರ್ಖಾನೆ ನಿರ್ಮಿಸಲು ಅಪ್ಪಣೆ ಕೊಟ್ಟ ಕೇಂದ್ರ ಮತ್ತು ರಾಜ್ಯ ಸಂಕಾರಂಗಳಿಗೆ ಇದನ್ನು ತಡೆಯುವಂತೆ ಸೂಚನೆ ಕೊಡಬೇಕು ; ಹೀಗೆ ಈ ಮಹತ್ಕಾರ್ಯದಲ್ಲಿ ಎಲ್ಲಾ ಮಹಾಜನಗಳ ಸಹಕಾರವಿದ್ದು ಪ್ರಾಣಿಗಳ ವಂಶಾಭಿವೃದ್ಧಿಯಲ್ಲಿ ತೊಡಗಿ ಪ್ರಾಣಿಗಳಲ್ಲಿ ಪ್ರೀಬೆಳೆಸಲಿ.

— ವಿಶ್ವನಾಥ

o o o

ದೇಶದ ಪರಿಸ್ಥಿತಿ

—o—

ಇಂದು ದೇಶದಾದ್ಯಂತ ಆರ್ಥಿಕ ವಾಗ್ಗಟ್ಟು ಆವರಿಸಿಕೊಂಡಿದೆ ; ಕಾರಣ, ಅಧಿಕಾರವರ್ಗದಲ್ಲಿ ಸೌಹಾರ್ದತೆಯಿಲ್ಲ, ಪ್ರಜೆಗಳಲ್ಲಿ ನೈತಿಕವಿಲ್ಲ ಇವೆಕ್ಕೂ ನಾವೇ ಕಾರಣವಾದ್ದರಿಂದ ನಮ್ಮ ತಪ್ಪನ್ನು ನಾವೇ ತಿದ್ದಿಕೊಂಡು, ದೇವರ ಒಲುಮೆಯನ್ನು ಪಡೆದು, ಆರ್ಥಿಕವೆಂಬ ಪೆಡಂಭೂತವನ್ನು ಹೊಡೆದೋಡಿಸಬೇಕಾಗಿದೆ. ದೇಶದ ಒಳಗೆ ಹೊರಗೆ ಆವರಿಸುತ್ತಿರುವ ತತ್ವಗಳನ್ನು ಹೊಡೆದೋಡಿಸಿ ನಮ್ಮ ದೇಶಾರ್ಪಣೆ ಮಾಡಿಕೊಂಡು ಸಿಕ್ಕಿರುವ ಸ್ವಾತಂತ್ರ್ಯವನ್ನು ಸುವ್ಯವಸ್ಥಿತ ಗೊಳಿಸಿ ಅಚಂದ್ರಾರ್ಕವಾಗಿ ನಿಲ್ಲಿಸುವುದೇ ಇಂದಿನ ನಮ್ಮ ಮೊದಲನೆಯ ಕರ್ತವ್ಯವಾಗಿದೆ

ಇಂದಿನ ಆರ್ಥಿಕ ದುಸ್ಥಿತಿ ಬಡ ಕುಟುಂಬಗಳನ್ನು ಆವರಿಸಿದೆ ; ಧನವಂತರಿಗೂ ಅಧಿಕಾರಿ ವರ್ಗದವರಿಗೂ ಅದರ ಕಾವು ಏರಿಲ್ಲವಾದ್ದರಿಂದ ಅವರು ಇತ್ತ ಕಡೆ ಮನಸ್ಸೋತಿಲ್ಲ. ಈ ಎಲ್ಲಾ ಅನಿಷ್ಟಗಳನ್ನೂ ದೇಶದಿಂದ ಓಡಿಸಲು ಉಳಿದಿರುವುದು ಒಂದೇಒಂದು ದಾರಿ, ಅದೇನೆಂದರೆ, ಜನರಲ್ಲಿ ಜಡತ್ವವು ಹೋಗಿ ಸಂಘಶಃ ದೇಶಕ್ಕಾಗಿ ದುಡಿಯುವ ಕಾರ್ಯತತ್ಪರರಾಗಲು ಮೊದಲು ದೇವರ ಒಲುಮೆಯನ್ನು ಭಕ್ತಿ ಜ್ಞಾನಗಳಿಂದ ಆರಾಧಿಸಿ, ಅಪೇಯವಾದ ಅಧರ್ಮಕೃತ್ಯಗಳನ್ನು ಮೊದಲು ತ್ಯಜಿಸಬೇಕು : ಆಗ ನಮಗೆ ತ್ಯಾಗಬುದ್ಧಿಯೂ ಒಳ್ಳೆಯ ಮೇಧಾಶಕ್ತಿಯೂ ಹುಟ್ಟುವುದು.

ಜನರು ದೇಶ ನಮ್ಮದು, ನಮ್ಮ ಗುರು, ದೇವರು, ನಮ್ಮ ವೇದ ಎಂಬ ಒಳ್ಳೆಯ ಭಾವವು ಅಭಿವ್ಯಕ್ತವಾಗುವುದು. ದೇಶದ ದೇವರು, ಗುರುಗಳು ಎಂಬ ಈ ವಾದವೂ ದೇಶದಲ್ಲಿ ಕಣ್ಮರೆಯಾಗಿವೆ : ಗೋ ಸ್ತ್ರೀ ಬ್ರಾಹ್ಮಣ ರಕ್ಷಣೆ ಯಾಗುವ ನಮ್ಮ ಬಡತನದ ದುಃಖಗಳು ದೂರವಾಗಲಾರವು, ಈ ಪ್ರಯತ್ನವೇ ನಾವು ಶಕ್ತಿಗಳಿಗೂ ಆಗಬೇಕಾಗಿದೆ. ದೇಶದಲ್ಲಿ ರೋಗ ಕಾಣಿಸಿಕೊಳ್ಳುವುದಕ್ಕೂ ಹಂಡಲವಕಾಶವಾಯಿತು, ದಯೆಯು ನಮ್ಮಿಂದ ದೂರವಾಯಿತು.

ಪೂಜ್ಯ ಗಾಂಧಿಯವರಿಂದ ಸ್ಥಾಪಿತವಾದ ಸ್ವತಂತ್ರಕ್ಕೆ ಹೆಚ್ಚು ಗೌರವ ಬರಲು, ದೇಶವು ಶಾಂತಿಯಿಂದ ಬಾಳಲೂ ಅತೋಕ ಶಕ್ತವರ್ತಿಯೂ ನಮಗೆ ತೋರಿಸಿದ ಮಾರ್ಗವನ್ನು ಬಿಡದೆ ಆಚರಿಸಬೇಕು ಆಗ ನಮಗೆ ದೈವಬಲ ದೊರೆಯುವುದು : ದೈವಬಲವಿಲ್ಲದೇ ದುರ್ಬಲವೆಂಬುದನ್ನು ಮರೆಯದೆ, ಭಾರತೀಯರ ಧರ್ಮ ಸಾಮಾನ್ಯ ವಿಶೇಷತಾನುದರಿಂದ ಹೊರದೇಶದಲ್ಲಿ ಹುಡಿದಂತೆ ಸಾರ್ವತ್ರಿಕವಾದ ಧರ್ಮವನ್ನು ವಿಶ್ವಸಂಸ್ಥೆಯಲ್ಲಿ ಎತ್ತಿಹಿಡಿದು, ಇತೀ ಮಾನವ ಜನಾಂಗದ ಮೇ ಮಾರ್ಪಡುವಂತೆ ನಿತ್ಯವೂ ಳಳ ಕೋಟಿ ಭಾರತೀಯರೂ ಮತ ಧರ್ಮ ಸಂಪ್ರದಾಯವನ್ನನುಸರಿಸಿ ದೇವರ ಧ್ಯಾನ ಮಾಡಲು ನನ್ನ ಪ್ರಾರ್ಥನೆ.

— ಬಿ. ಜಿ. ಶಾಸ್ತ್ರಿ, (ದ. ರೈಲ್ವೆ)
ವಿದ್ಯಾರಣ್ಯಪುರಂ, ಮೈಸೂರು

—

ವುಡ್‌ಲಾಂಡ್ ಜನಪ್ರಿಯತೆ 2 ನೇ ವಾರ
ಶಿ ನ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನ

ಚಿತ್ತಾಕರ್ಷಕ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) Janwar

ಶಮ್ಮಿ ಕಪೂರ್, ರಾಜಶ್ರೀ, ರಾಜೇಂದ್ರನಾಥ್, ಪ್ರಾಕ್ರವಹಿಸಿರುವರು
ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಬಬ್ಬಿ ಸೋನಿಲ್

ಆಪೆರಾ— 28—5—65 ರಿಂದ
ಅತ್ಯನೋಘ ಕನ್ನಡ ಚಿತ್ರಕಥೆ — ದಿನ 3 ಆಟಗಳು
ನನ್ನ ಕರ್ತವ್ಯ [ಕನ್ನಡ]
ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು,
ಚಾಂದ್‌ಬಾಬು, ಸಂಧ್ಯಾ, ಜಯ ಲಲಿತ,

SHAKTI
SUDHA

A Superb Tonic



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Camarajapuram Mysore 4